

ಕೊಟ್ಟುಬಿಟ್ಟಳು. 'ನಿನಗೇನು, ಸರ್ಕಾರಿ ನೌಕರಿ ಅದ. ಪಗಾರ ಬರ್ತದ. ಮುಂದ ಪೆನಷನ್ ಬರ್ತದ. ಅಂವ ಎರಡು ಮಕ್ಕಳ್ನ ಕಟಗೊಂಡು ಏನು ಮಾಡಬೇಕು?' ಎನ್ನುವ ಸಮಜಾಯಿಷಿ ಬೇರೆ. ಆಘಾತವಾಗಿತ್ತು ವೆಂಕಟೇಶರಿಗೆ. 'ಇಷ್ಟು ವರ್ಷ ನಾ ಮೂಗಿಗೆ ಕವಡಿ ಕಟಗೊಂಡು ಆಫೀಸಿನ್ಯಾಗ, ಹೊಲದಾಗ ದುಡದೇನಿ. ಅಕಿ ಮೂಕ ಆಕಳ ಗತೆ ಮನ್ಯಾಗ ದುಡದಾಳ. ಕಿಮ್ಮತ್ತ ಇಲ್ಲೇನು? ನಮ್ಮ ರೊಕ್ಕಾ ನಮಗ ಕೊಡು' ಎಂದರು. 'ಎಲ್ಲೀ ರೊಕ್ಕಾ? ನೀ ಕೊಟ್ಟ ಪಗಾರ ಮನೀಗೆ ಖರ್ಚು ಮಾಡೇನಿ. ನೀನು, ನಿನ್ನ ಹೆಂಡ್ತಿ ಮಕ್ಕಳು ತಿಂತಿದ್ದಿಲ್ಲೇನು' ಎಂದುಬಿಟ್ಟರು. ಸ್ತಂಭೀಭೂತರಾಗುವ ಸರದಿ ನಮ್ಮದು. ಅಪ್ಪ, ಅಮ್ಮ ಬೇಡಿಕೊಂಡರು. ಜೋರು ಮಾಡಿದರು. ಅತ್ತಾ ಏನಾದರೂ ಬಗ್ಗಲಿಲ್ಲ. ಎದೆಯ ಮೇಲೆ ಮಗಳ ಮದುವೆ. ಅದೂ ಕೇವಲ ಮೂರೇ ತಿಂಗಳಲ್ಲಿ. ಕೈಯಲ್ಲಿ ಕಾಸಿಲ್ಲ. ಅಪ್ಪ ಸಂತೈಸಿದ. ತಮ್ಮ, ಅಕ್ಕ ಆಸರೆಯಾದರು. ಪ್ರಾವಿಡೆಂಟ್ ಫಂಡ್‌ನಲ್ಲಿಯ ದುಡ್ಡು ತೆಗೆದು ಮದುವೆ ಚೆನ್ನಾಗಿಯೇ ಮಾಡಿದೆವು.

ನಂತರ ಮಾಡಿದ ಮೊದಲ ಕೆಲಸವೆಂದರೆ ದೂರ ವರ್ಗಾವಣೆ ಕೇಳಿದ್ದು. ತಕ್ಷಣ ಬೆಂಗಳೂರಿಗೆ ಸಮೀಪದ ಸರ್ಜಾಪುರಕ್ಕೆ ವರ್ಗಾವಣೆಯಾಗಿತ್ತು. ಗಂಟುಮೂಟೆ ಕಟ್ಟುವಾಗಲೂ ಜ್ವಾಲಾಮುಖಿ ಸ್ಫೋಟಿಸುವಂಥ ಉದ್ವಿಗ್ನ ವಾತಾವರಣ. 'ಎಲ್ಲಾ ಮನಿ ಸಾಮಾನುಗಳು. ಕೈ ಹಚ್ಚೋ ಹಂಗಿಲ್ಲ' ಎಂದಳು ಅತ್ತಾ. ಬರೀ ನಮ್ಮ ಬಟ್ಟೆಗಳೊಂದಿಗೆ ಹೊರಟು ಬೆಂಗಳೂರಿನಲ್ಲಿ ಮನೆ ಮಾಡಿದ್ದಾಯಿತು. 'ಅ ಆ ಇ ಈ'ಯಿಂದ ನಮ್ಮ ಹೊಸ ಸಂಸಾರ ಆರಂಭವಾಗಿತ್ತು. ಅಕ್ಕ, ತಮ್ಮ, ಅಮ್ಮರಿಂದ ಹೆಂಚು, ಕೊಳಗ, ತಪ್ಪಲೆ ಎಂದೆಲ್ಲ ಸಂಗ್ರಹವಾಗಿ ಸಂಸಾರವಾಯಿತು. ಅನಂತ ತಾನೂ ಸಂಜೆ ಕಾಲೇಜಿನಲ್ಲಿ ಓದಿ ಸಂತೋಷನನ್ನೂ ಎಂಜಿನಿಯರಿಂಗ್ ಓದಿಸಿದ. ಅವನಿಗೂ ಒಳ್ಳೆಯ ಕಂಪನಿಯಲ್ಲಿ ಕೆಲಸವಾಯಿತು. ಕ್ರಮೇಣ ಸೊಸೆಯರು ಬಂದರು. ಇಬ್ಬರೂ ಕೆಲಸದಲ್ಲಿದ್ದವರೇ. ಅಡಿಗೆ, ಕೆಲಸ ನಾನು ನೋಡಿಕೊಳ್ಳುತ್ತಿದ್ದೆ. ಅವರೂ ಸಹಾಯ ಮಾಡುತ್ತಿದ್ದರು. ಇಬ್ಬರಿಗೂ ಎರಡೆರಡು ಮಕ್ಕಳು. ಮನೆ ನಂದನವನವಾಯಿತು. ವೆಂಕಟೇಶ ನಿವೃತ್ತಿಯಾದರು. ಸ್ವಂತ ಸೈಟು ತೆಗೆದು ಮಕ್ಕಳು ಅಕ್ಕಪಕ್ಕ ಮನೆ ಕಟ್ಟಿಕೊಂಡರು. ಗೃಹಪ್ರವೇಶಕ್ಕೆ ಬಂದ ಅತ್ತಾಳ ಕಣ್ಣಲ್ಲಿ ಸಂತೋಷವಿರಲಿಲ್ಲ. ಓರಗಿತ್ತಿಯ ಮುಖದಲ್ಲಿ ಅಸೂಯೆ ತುಂಬಿತ್ತು. ಆದರೆ ನನಗೆ ಸಮಾಧಾನವಾಗಿತ್ತು. ಅಂತೂ ಮಕ್ಕಳು ನೆಲೆ ಕಂಡುಕೊಂಡರಲ್ಲ.

ಮಕ್ಕಳದ್ದಾಯಿತು. ಆದರೆ ನನ್ನ ಒಳಗುದಿ ಇನ್ನೂ ಕಡಿಮೆಯಾಗಿರಲಿಲ್ಲ. ಈಗ ಪತಿ ನನ್ನನ್ನು ಬಹಳ ಚೆನ್ನಾಗಿ ಗಮನಿಸಿಕೊಳ್ಳುತ್ತಾರೆ. ಸೀರೆ, ಒಡವೆ ಯಾವುದಕ್ಕೂ ಕಮ್ಮಿ ಇಲ್ಲ. ಸೊಸೆಯರೂ ಚೆನ್ನಾಗಿ ಹೊಂದಿಕೊಂಡಿದ್ದಾರೆ. ನಾಲ್ಕು ಜನ ಮೊಮ್ಮಕ್ಕಳು ಅಜ್ಜಿ ಎಂದು ಸುತ್ತ ಓಡಾಡುತ್ತಾರೆ. ಕೊರತೆಯೆಂದರೆ ಅದೊಂದೇ. ರಾತ್ರಿಯ ಘರ್ಷಣೆ ಇನ್ನೂ ಕಡಿಮೆಯಾಗಿಲ್ಲ. ಸುಗುಣಳಿಗೆ ಗೊತ್ತು. ಬಂದಾಗ 'ನಾವು ಮಾತನಾಡಿಕೊಳ್ಳಬೇಕು ಅಪ್ಪಾ' ಎಂದು ಅವರನ್ನು ಹೊರಗೆ ಮಲಗಿಸುತ್ತಾಳೆ. ನನ್ನನ್ನೂ ಊರಿಗೆ ಕರೆದೊಯ್ಯುತ್ತಾಳೆ. ಆದರೆಷ್ಟು ದಿನ? ಮೊಮ್ಮಕ್ಕಳಿಗಾಗಿ, ಪತಿಗಾಗಿ ನಾನೇ ಓಡಿ ಬರುತ್ತೇನೆ. ಕಿವುಡುತನದ ಜೊತೆ ಬಿ.ಪಿ., ಶುಗರ್, ಕೊಲೆಸ್ಟರಾಲ್ ಅವರನ್ನು ಕಾಡುತ್ತಿವೆ. ಔಷಧಿ, ಮಾತ್ರೆಗಳು ನಡೆದೇ ಇವೆ. ಕಿವಿಗೆ 'ಹಿಯರಿಂಗ್ ಏಯ್ಡ್' ತಂದುಕೊಟ್ಟರೂ ಬಳಸುವುದಿಲ್ಲ. 'ಕಿವಿ ಗುಂಯ್ ಅಂಥಂಗಾಗಿ ತ್ರಾಸಾಗ್ತದ' ಎನ್ನುತ್ತಾರೆ. ಅದೊಂದಿಲ್ಲದಿದ್ದರೆ ನಾನೂ ಸುಖಿಯೇ. ಹೊಟ್ಟೆಯ ಹಸಿವಿಗೆ ನಿತ್ಯ ಆಹಾರ ಸೇವಿಸುವಂತೆ ದೇಹದ ಹಸಿವನ್ನೂ ನಿತ್ಯ ತಣಿಸಬೇಕೆಂದುಕೊಂಡಿದ್ದಾರೆ. ಈಗ ಸಾಕಷ್ಟು ಮಾರ್ದವವಾಗಿದ್ದರೂ ನನ್ನ ಕೈಲಿ ಸಾಧ್ಯವಾಗುತ್ತಿಲ್ಲ. ಬೇಕಾದರೆ ಹೊರಗೆಲ್ಲಾದರೂ ಸುಖ ಕಂಡುಕೊಳ್ಳಲಿ ಅಥವಾ ಪರ್ಯಾಯ ಉಪಾಯ ಯೋಚಿಸಲಿ. ಹೇಳಬೇಕೆಂದರೆ ಮಹಾರಾಯ ಕಿವುಡರು. ನನ್ನ ಸುತ್ತ ಸದಾ ಮೊಮ್ಮಕ್ಕಳು, ಆಳುಕಾಳುಗಳು. ರಾತ್ರಿ ಆಂಗಿಕವಾಗಿ ಹೇಳಿದರೆ ಕೇಳಲು ವ್ಯವಧಾನವಿರುವುದಿಲ್ಲ. ಮೊಬೈಲ್‌ನಲ್ಲಿ ಟೈಪಿಸಲು ಇಬ್ಬರಿಗೂ ಬರುವುದಿಲ್ಲ. ಪತ್ರ ಬರೆದರೆ ಅದು ಯಾರ ಕೈಗಾದರೂ ಸಿಕ್ಕಿದರೆ ಎನ್ನುವ ಹೆದರಿಕೆ. ಈ ವಿಷಯಕ್ಕಾಗಿ ಜಗಳವಾಡಿದರೆ ಮಗ–ಸೊಸೆಯರ ಮುಂದೆ ಮಾನಗೇಡು. ಬೆಕ್ಕಿಗೆ ಗಂಟೆ ಕಟ್ಟುವವರಾರು ಎಂಬ ಪರಿಸ್ಥಿತಿ. ಕಟ್ಟಬೇಕು... ನಾನೇ ಗಂಟೆ ಕಟ್ಟಬೇಕು.

ಯೋಚನಾಲಹರಿ ಸಾಗಿದ್ದಾಗಲೇ ವೆಂಕಟೇಶ ಒದ್ದೆಬಟ್ಟೆ ಕೈಯಲ್ಲಿ ಹಿಡಿದುಕೊಂಡು ಬಂದರು. 'ಸಾಕ ನಡ್ರಿ, ನಿಮಗ ಥಂಡಿಯಾಗ್ತದ' ಅಂದ್ರು. ತಿರಗಿ ಬಂದೆ' ಎನ್ನುತ್ತ ಒದ್ದೆ ಬಟ್ಟೆಯನ್ನು ಬೇರೆ ಚೀಲದಲ್ಲಿಟ್ಟರು. ಟವಲ್‌ನಿಂದ ತಲೆ ಒರೆಸಿಕೊಳ್ಳುತ್ತ ಉಳಿದ ನಾಲ್ಕೇ ಕೂದಲುಗಳನ್ನು ಒಂದೊಂದಾಗಿ ಒರೆಸಿಕೊಂಡರು. ಫಕ್ಕನೆ ನಕ್ಕೆ. ನನ್ನತ್ತ ತಿರುಗಿ ಪ್ರಶ್ನಾರ್ಥಕವಾಗಿ ದಿಟ್ಟಿಸಿದವರಿಗೆ ಕೂದಲೇ ಇಲ್ಲವೆಂದು ಸನ್ನೆ ಮಾಡಿದೆ. ತಾವೂ ನಕ್ಕರು. ಸಂದರ್ಭ ಒದಗಿ ಬಂದಿತ್ತು. ಪಕ್ಕದಲ್ಲಿದ್ದ ಪುನೀತನ ಪುಸ್ತಕದಿಂದ ಪುಟವೊಂದನ್ನು ಹರಿದು 'ಇನ್ನ ನನ್ನ ಕೈಲೇ ಆಗೂದುಲ್ಲಾ' ಎಂದು ಬರೆದು ಅವರ ಕನ್ನಡಕದೊಂದಿಗೆ ಕೈಗಿತ್ತೆ. ನೋಡಿದವರು 'ಅಷ್ಟ ಕೆಲಸಾ ಮಾಡಬ್ಯಾಡಾ. ಅವರವರ ಮನಿ ಕೆಲಸಾ ಅವರು ನೋಡಕೋತಾರ ಅಂದ್ರ ನೀ ಎಲ್ಲೆ ಕೇಳತಿ? ಮೈಮ್ಯಾಲ ಎಳಕೊಂಡು ಕೆಲಸಾ ಮಾಡತಿ' ಎಂದು ಉಪದೇಶ ಆರಂಭಿಸಿದರು. 'ಅದಲ್ಲಾ, ರಾತ್ರಿ ಕೆಲಸ ಆಗೂದುಲ್ಲಾ' ಎಂದು ಬರೆದೆ. 'ಹಗಲೇನು, ರಾತ್ರಿಯೇನು? ವಯಸ್ಸಾದ ಮ್ಯಾಲೆ ಕೆಲಸ ಆಗಂಗಿಲ್ಲ' ಎಂದು ಮುಂದುವರೆಸಿದರು. 'ಅದಲ್ಲಾ, ನನಗ ರಾತ್ರಿ ಕೆಲಸ ಬ್ಯಾಡಾಗೇದ. ಅದರಿಂದ ನನಗ ಮುಕ್ತಿ ಕೊಡ್ರಿ. ನೀವು ಬ್ಯಾರೇ ಏನರೆ ಮಾಡಕೋರಿ' ಎಂದು ಬರೆದು ಅವರ ಕೈ ಒತ್ತಿ ಹಿಡಿದೆ. ಅರ್ಥವಾದಂತೆ ಒಂದು ಕ್ಷಣ ಸುಮ್ಮನೆ ಕುಳಿತರು. 'ಇಷ್ಟು ದಿವಸ ಮಶಿನ್‌ಗತೆ ಕೆಲಸಾ ಮಾಡೇನಿ. ಇನ್ನ ನನ್ನ ಬಿಟ್ಟು ಬಿಡ್ರಿ' ಎಂದು ಬರೆದು ಪ್ರತಿಕ್ರಿಯೆಗಾಗಿ ಕಾಯ್ದೆ. ಅಲ್ಲಿ ಗಾಂಭೀರ್ಯ ನೆಲೆಸಿತ್ತು. ಒಂದು ಕ್ಷಣ ಹೆದರಿಕೆಯೂ ಆಯಿತು. ಏನೆನ್ನುವರೋ? ಹೆಂಡತಿಯಾಗಿದ್ದರೂ ಅವರ ಹಕ್ಕನ್ನು ನಾನು ನಿರಾಕರಿಸುತ್ತಿದ್ದೇನೆ. ಮುಂದೆ ಜಗಳ, ಕೋರ್ಟು, ಡೈವೋರ್ಸು ಎಂದರೆ? ಕಾರಣ ಏನು ಹೇಳಲಿ? ಮುಪ್ಪಿನಲ್ಲಿ ಮಾನ ಕಳೆದುಕೊಳ್ಳಬೇಕೋ ಕಾಣೆ. ಆದರೆ ಹೇಳಿದ್ದಾಗಿದೆಯಲ್ಲ, ಇನ್ನು ದೇವರೇ ಗತಿ ಎಂದುಕೊಂಡಾಗ ಕಣ್ಣಾಲಿಗಳು ತುಂಬಿ ಬಂದವು.

ಮರುಕ್ಷಣವೇ ಮೌನ ಮುರಿದು 'ನನಗರೆ ಎಲ್ಲಿ ಬೇಕಾಗೇದ? ನನಗೇನು ವಯಸ್ಸು ಕಡಿಮ್ಯಾಗ್ಯಾವ. ಇನ್ನೆರೆಡು ತಿಂಗಳಿಗೆ ಎಪ್ಪತ್ತಾಗ್ತಾವ. ಖರೇ...' ಎನ್ನುತ್ತ ನಿಲ್ಲಿಸಿದರು. ಪ್ರಶ್ನಾರ್ಥಕ ದೃಷ್ಟಿಯಿಂದ ಅವರನ್ನೇ ದಿಟ್ಟಿಸಿದೆ.

"ಮತ್ತ... ಮತ್ತ... ಅವ್ವಾ 'ಹೆಂಡ್ತಿನ್ನ ಕೈಯಾಗಿಟಗೋಬೇಕಂದ್ರ ದಿನಾ ಪೌರುಷ ತೋರಸ್ಬೇಕು. ಇಲ್ಲಾಂದ್ರ ಅಂಕಿ ತಪ್ಪಿ ಹೋಗ್ತಾಳ' ಅಂತ ಹೇಳಿದ್ಲು" ಎಂದು ಮೆತ್ತಗೆ ನುಡಿದರು.

ನನ್ನ ಸಿಟ್ಟು ನೆತ್ತಿಗೇರಿತ್ತು. 'ಹೇಳಿದಾವ್ರು ಯಾವಾಗೋ ಮ್ಯಾಲೆ ಹೋದ್ರು. ಏನೇನೋ ತಪ್ಪು ಹೇಳಿ ಇಬ್ಬರೂ ಜೀವನಪೂರ್ತಿ ಒದ್ದಾಡೋಹಂಗ ಮಾಡಿದ್ರು. ಮುಖ್ಯ ಕೇಳಾವ್ರಿಗೆ ಬುದ್ಧಿ ಬೇಕು' ಎಂದು ಬರೆದು ತೋರಿಸಿದೆ.

ಅವರು ಓದಿದಾಕ್ಷಣ ಕಾಗದವನ್ನು ಮುದ್ದೆ ಮಾಡಿ ಹತ್ತಿರವಿದ್ದ ಕಸದ ಬುಟ್ಟಿಗೆ ಎಸೆದೆ. ಮನ ಪ್ರಕ್ಷುಬ್ಧವಾಗಿತ್ತು. ಕೈ ಒತ್ತಿ ಹಿಡಿದು ಕುಳಿತವರು 'ನಂದು ತಪ್ಪಾತು. ಸಾರಿ... ಇನ್ನ ಮುಂದ ಇಬ್ಬರೂ ಆರಾಮ ಇರೋಣು. ನನಗೂ ನಿಶ್ಚಿಂತ್ಯಾತು' ಎಂದು ನನ್ನತ್ತ ನೋಡಿದರು. ಇಬ್ಬರೂ ನಿರಾಳವಾಗಿ ನಕ್ಕೆವು. ಪಕ್ಕದಲ್ಲಿ ಮಲಗಿದ್ದ ಮಗು ನಿದ್ದೆಯಲ್ಲೇ ಮಂದಹಾಸ ಬೀರುತ್ತಿತ್ತು.

ಪ್ರತಿಕ್ರಿಯಿಸಿ: feedback@sudha.co.in

